## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್ ಪಿ ಸುಧಾಮ್ ದಾಸ್ ಇವರ ನಿಯಮ 72ರಡಿ ಗಮನ ಸೆಳೆಯುವ ಸೂಚನೆಗೆ ಹೇಳಿಕೆ

**ಸೂಚನೆ-**

ಪ್ರತಿ ಮನೆಗೆ ನೀರು ಪೂರೈಸುವ ಉದ್ದೇಶದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಯ "ಜಲ ಜೀವನ್ ಮಿಷನ್" ಕುಡಿಯುವ ನೀರು ಒದಗಿಸುವ ಬದಲು ರಾಜ್ಯದ ಪ್ರತಿಯೊಂದ ಹಳ್ಳಿಯ ರಸ್ತೆಗಳನ್ನು ಸಂಪೂರ್ಣ ಹದಗೆಡಿಸುತ್ತಿದ್ದು, ಈ ಯೋಜನೆಯ ಸಂಪೂರ್ಣ ವೈಫಲ್ಯತೆ ಬಗ್ಗೆ ಮಾನ್ಯ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ ಹಾಗೂ ಡಾ. ಜಿ. ಪರಮೇಶ್ವರ್ ರವರನ್ನೊಳಗೊಂಡಂತೆ ಅನೇಕ ಸಚಿವ ಶಾಸಕರು ದೂರುತ್ತಿದ್ದು, ಈಗಾಗಲೇ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾವಿರಾರು ಕೋಟಿ ನುಂಗಿರುವ ಈ ಯೋಜನೆಗೆ ರಾಜ್ಯ ಸರ್ಕಾರವು ತಮ್ಮ 2025-26ನೇ ಸಾಲಿನ ಆಯವ್ಯಯದಲ್ಲಿಯೂ ರೂ.6050.00 ಕೋಟಿ ಒದಗಿಸಲಾಗಿದ್ದು, ಸದರಿ ಹಣ ಬಿಡುಗಡೆಗೂ ಮುನ್ನ ಸದರಿ ಯೋಜನೆ ಸಂಪೂರ್ಣ ಸಫಲಗೊಳಿಸುವ ದೃಷ್ಟಿಯಿಂದ ವೈಜ್ಞಾನಿಕವಾಗಿ ಪರಿಷ್ಕರಿಸುವ ಅಗತ್ಯ ಕುರಿತಂತೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯುವುದು.

**ಹೇಳಿಕೆ:-**

ಜಲ ಜೀವನ್ ಮಿಷನ್ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆಯ ಹಾಗೂ ಗ್ರಾಮದೊಳಗಿನ ಪ್ರತಿ ಮನೆಗೆ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ ಕಾಮಗಾರಿಗಳಲ್ಲಿ ಕೊಳವೆಗಳನ್ನು ಅಳವಡಿಸುವಾಗ ರಸ್ತೆಯನ್ನು ಅಗೆಯುವುದು ಅನಿವಾರ್ಯವಾಗಿರುತ್ತದೆ.

ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವ ಸಂದರ್ಭದಲ್ಲಿ ಕೊಳವೆಗಳನ್ನು ಅಳವಡಿಸುವಾಗ ಅಗೆದಿರುವ ಕಾಂಕ್ರೀಟ್ ಹಾಗೂ ಡಾಂಬರ್ ರಸ್ತೆಗಳನ್ನು ನಿಗದಿತ ಗುಣಮಟ್ಟದಂತೆ ಮರುಪೂರಣ ಮಾಡುವ ಕೆಲಸವನ್ನು ಕೊಳವೆ ಅಳವಡಿಸಿದ ತರುವಾಯ ಅಂದಾಜು ಪಟ್ಟಿಯಲ್ಲಿನ ಅನುಮೋದನೆಯಂತೆ ಕೈಗೆತ್ತಿಕೊಳ್ಳಲಾಗುತ್ತಿದೆ.

ಕಾಮಗಾರಿಗಳು ಪೂರ್ಣಗೊಂಡ ಸ್ಥಳಗಳಲ್ಲಿ ಸಮರ್ಪಕವಾಗಿ ರಸ್ತೆ ಮರುಪೂರಣ ಮಾಡಿ ವಾಹನಗಳ / ಪಾದಚಾರಿಗಳ ಸುಗಮ ಸಂಚಾರಕ್ಕೆ ತೊಂದರೆಯುಂಟಾಗದಂತೆ ರಸ್ತೆಗಳನ್ನು ಸುಸ್ಥಿತಿಗೆ ತರಲು ಕ್ರಮವಹಿಸಲಾಗುತ್ತಿದೆ.

ಕಾಮಗಾರಿ ವೇಳೆ ಕಾಂಕ್ರೀಟ್ ರಸ್ತೆಗಳನ್ನು ಅಗೆಯಲು Concrete groove cutting ಕೊರೆಯುವ ಯಂತ್ರವನ್ನು ಬಳಸಲಾಗುತ್ತಿದೆ ಹಾಗೂ ಕಾಮಗಾರಿ ಪ್ರಕ್ರಿಯೆಯಾದ Hydro testing ಮಾಡಿದ ನಂತರ ರಸ್ತೆ ಮರುಪೂರಣ ವ್ಯವಸ್ಥೆ ಮಾಡಲಾಗುತ್ತಿರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸುವಲ್ಲಿ ಅಲ್ಪಮಟ್ಟದಲ್ಲಿ ವಿಳಂಬವಾಗುತ್ತಿದೆ.

ಮುಂದುವರೆದು, ಜಲ್ ಜೀವನ್ ಮಿಷನ್ ಯೋಜನೆಯನ್ನು ಜಿಲ್ಲಾ ಹಂತದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ಯೋಜನೆಯ ಮೇಲುಸ್ತುವಾರಿಯನ್ನು ವಹಿಸಿರುತ್ತಾರೆ. ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ 3ನೇ ವ್ಯಕ್ತಿ ತಪಾಸಣೆ (TPIA) ಸಂಸ್ಥೆಯನ್ನು ನಿಯೋಜಿಸಲಾಗಿದ್ದು, ರಾಜ್ಯಮಟ್ಟದಲ್ಲಿ ರಾಜ್ಯ ಗುಣಮಟ್ಟ ಸಮಾಲೋಚಕರು (SQM) ರವರನ್ನು ಹಾಗೂ ಕೇಂದ್ರ ಮಟ್ಟದಲ್ಲಿ National Wash Expertsಗಳನ್ನು ಕಾಲಕಾಲಕ್ಕೆ ನಿಯೋಜಿಸಿ ಕಾಮಗಾರಿಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅಳವಡಿಸಲಾಗುತ್ತಿರುವ HDPE ಕೊಳವೆಗಳ ಗುಣಮಟ್ಟವನ್ನು ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ Central Institute For Petroleum Engineering Technology(CIPET) ಸಂಸ್ಥೆಯಿಂದ ಕಡ್ಡಾಯವಾಗಿ ಪರಿಶೀಲಿಸಲಾಗುತ್ತಿದೆ.

ಅಲ್ಲದೇ, ಪ್ರಸ್ತುತ ರಾಜ್ಯಮಟ್ಟದಲ್ಲಿ ಒಟ್ಟಾರೆ ರಾಜ್ಯದ ಜೆಜೆಎಂ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲು 3ನೇ ವ್ಯಕ್ತಿ ತಪಾಸಣೆಯ ಸ್ವತಂತ್ರ ಸಂಸ್ಥೆಯಾದ M/S Bureau Veritas, ಚೆನ್ನೈ ಇವರಿಗೆ ವಹಿಸಲಾಗಿದ್ದು, ಈ ಸಂಸ್ಥೆಯು ಸಹ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸುತ್ತಿದ್ದು, ಶಿಫಾರಸ್ಸಿನಂತೆ ಕ್ರಮಕೈಗೊಂಡು ಕಾಮಗಾರಿಗಳ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲಾಗುತ್ತಿದೆ.

ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ ಸುಸ್ಥಿರ ಭೂ-ಮೇಲ್ಮೈ ನೀರನ್ನು ಶುದ್ಧೀಕರಿಸಿ ಜನವಸತಿಗಳಿಗೆ ಸರಬರಾಜು ಮಾಡಲು ಯೋಜಿಸಿದ್ದು, ರಾಜ್ಯದಲ್ಲಿ ಒಟ್ಟಾರೆಯಾಗಿ 1,00,27,286 ಮನೆಗಳ ಪೈಕಿ ಬಹಗ್ರಾಮ ಕುಡಿಯುವ ನೀರಿನ ಯೋಜನೆಯಿಂದ 75,27,759 ಮನೆಗಳಿಗೆ ನೀರನ್ನು ಪೂರೈಸಲು ಯೋಜಿಸಲಾಗಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ದಿನಾಂಕ:25.10.2024 ರಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ನೀತಿಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಹೊರಡಿಸಲಾಯಿತು. ಗ್ರಾಮೀಣ ನೀರು ಸರಬರಾಜು ವ್ಯವಸ್ಥೆಯ ಜಲಮೂಲದ ಸ್ಥಿರತೆ, ಮೂಲಸೌಕರ್ಯ ನಿರ್ವಹಣೆ, ಆರ್ಥಿಕ ಸ್ಥಿರತೆ ಮತ್ತು ಸಾಮರ್ಥ್ಯ ನಿರ್ಮಾಣದ ಉದ್ದೇಶದಿಂದ ರೂಪಿಸಲಾಗಿದೆ.

ಈ ನೀತಿಯನ್ವಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜವಾಬ್ದಾರಿಯಾಗಿದ್ದು, ಶುದ್ಧ ಕುಡಿಯುವ ನೀರನ್ನು ಗ್ರಾಮ ಪಂಚಾಯಿತಿಗಳಿಗೆ ಒದಗಿಸಲಾಗುವುದು, ಗ್ರಾಮ ಪಂಚಾಯಿತಿಗಳಿರುವ ಏಕಗ್ರಾಮ ಕುಡಿಯುವ ನೀರಿನ ಯೋಜನೆ ಮತ್ತು ಗ್ರಾಮೀಣ ವಿತರಣಾ ಜಾಲದ ನಿರ್ವಹಣೆಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಜವಾಬ್ದಾರಿಯಾಗಿರುತ್ತದೆ.

ಕೇಂದ್ರ ಸರ್ಕಾರದಿಂದ ನಡೆಸಲಾಗುತ್ತಿರುವ Functionality Assessment ವರದಿಯನ್ವಯ ಹರ್ ಘರ್ ಜಲ್ ಎಂದು ಘೋಷಿಸಿರುವ ಗ್ರಾಮಗಳಲ್ಲಿ (ಶೇ.100 ರಷ್ಟು ನಳ ಸಂಪರ್ಕ ಒದಗಿಸಿರುವ) ನಳ ಸಂಪರ್ಕಗಳು ಕಾರ್ಯಾತ್ಮಕವಾಗಿರುವ ಬಗ್ಗೆ ಖಾತರಿಪಡಿಸಲು ಇಲಾಖೆಯ ಕಿರಿಯ / ಸಹಾಯಕ ಅಭಿಯಂತರರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಜಂಟಿ ಪರಿವೀಕ್ಷಣೆಯನ್ನು ನಡೆಸಿ, ದೃಢೀಕರಿಸಲಾಗುತ್ತಿದೆ.

(ಪ್ರಿಯಾಂಕ್ ಖರ್ಗೆ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/ 267 /2024-25